ಎದ್ದು ಕಾಣುತ್ತಿದ್ದ ಮಣ್ಣಿನ ಗೋಡೆಗಳ ಬದಲು ಉಬ್ಬು ತಗ್ಗುಗಳಿಲ್ಲದ ಸಪಾಟಾದ ಸಿಮೆಂಟಿನ ಬಿಳಿ ಬಣ್ಣದ ಗೋಡೆ ಕಣ್ಣ ಮುಂದೆ ಬಂತು. ಸೆಗಣಿ ಸಾರಣೆಯ ಮಣ್ಣಿನ ನೆಲ ಗೌಡರ ಮನೆಯ ನುಣುಪಾದ ಟೈಲ್ಸ್ ಹೊದ್ದಂತೆ ಕನಸು ಕಾಣತೊಡಗಿದಳು ಸಾವಕ್ಕ.

ಬೆಳಕು ಹರಿಯುತ್ತಿದ್ದಂತೆಯೇ ಊರಲ್ಲಿ ವಾಹನಗಳ ಓಡಾಟ ಜಾಸ್ತಿಯಾಗತೊಡಗಿತ್ತು. ಬುಟ್ಟಿ ಹಿಡಿದು ಸೆಗಣಿಗೆಂದು ಕೆರೆ ಅಂಗಳದ ಕಡೆಗೆ ಹೊಂಡಬೇಕೆನ್ನಿಸುವಷ್ಟರಲ್ಲಿ ಬಾಗಿಲ ಮುಂದೆ ಬಿಳಿ ಬಣ್ಣದ ಕಾರೊಂದು ಬಂದು ನಿಂತಿತು. ಅದರಿಂದ ಇಳಿದ ಪಂಚಾಯ್ತಿ ಅಧ್ಯಕ್ಷರು ಹಾಗೂ ಸೂಟು ಬೂಟು ಹಾಕಿಕೊಂಡಿದ್ದ ನಾಲ್ಕಾರು ಜನ ಸಾವಕ್ಕನ ಮನೆಯನ್ನು ಪ್ರವೇಶಿಸಿದ್ದರು. ಈ ಬೆಳವಣಿಗೆಯಿಂದ ಅವಾಕ್ಕಾದ ಸಾವಕ್ಕ ಥರಗುಟ್ಟತೊಡಗಿದಳು. ಕೈಯ್ಯಲ್ಲಿದ್ದ ಬುಟ್ಟಿಯನ್ನು ಮೂಲೆಗೆಸೆದವಳೇ ತಲೆಯ ಮೇಲೆ ಸೆರಗೆಳೆದುಕೊಂಡು ಕೈ ಮುಗಿದು ನಿಂತಳು. ಬಂದವರು ಬೂಟುಗಾಲಿನಲ್ಲಿಯೇ ಮನೆಯೆಲ್ಲ ಓಡಾಡಿ ಸಾವಕ್ಕ ಕೇಳಿರಲಾರದ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಕೈಯಲ್ಲಿ ಕ್ಯಾಮೆರಾ ಹಿಡಿದು ಎಲ್ಲವನ್ನೂ ಚಿತ್ರಿಸಿಕೊಳ್ಳುತ್ತಿದ್ದ ಟಿ.ವಿ. ಮಂದಿ ಬಂದವರ ಹಿಂದೆ ಮುಂದೆ ಓಡಾಡುತ್ತಿದ್ದರು. ಅಷ್ಟರಲ್ಲಿ ಬಲಗಡೆಗೆ ಸ್ವಲ್ಪ ಎತ್ತರದಲ್ಲಿದ್ದ ಅಡಿಗೆಮನೆಗೆ ಎಲ್ಲರೂ ಬೂಟುಗಾಲಿನಲ್ಲಿಯೇ ಪ್ರವೇಶಿಸಿದ್ದನ್ನು ಕಂಡ ಸಾವಕ್ಕನ ಎದೆ ಝಲ್ ಎಂದಿತು. ಅವರು ತನ್ನ ಎದೆಯ ಮೇಲೆ ನಡೆದಾಡಿದಂತೆ ಆಕೆಗೆ ಭಾಸವಾಗತೊಡಗಿತು. ಅಡಿಗೆಮನೆಯಲ್ಲಿದ್ದ ಗೂಡೊಂದರಲ್ಲಿ ಮನೆ ದೇವರಾದ ಸವದತ್ತಿ ಯಲ್ಲಮ್ಮ ವಿರಾಜಮಾನಳಾಗಿದ್ದಳು. ಪ್ರತಿ ಮಂಗಳವಾರ, ಶುಕ್ರವಾರ ಮಡಿ ಹುಡಿಯಿಂದ ಯಲ್ಲಮ್ಮನನ್ನು ಪೂಜಿಸಿ ಐದು ಮನೆಗಳಿಗೆ ಹೋಗಿ ಯಕ್ಕಯ್ಯ ಜೋಗಯ್ಯ ಎಂದು ಜೋಗ್ಯಾಡಿ ಬರುತ್ತಿದ್ದಳು. ಭಿಕ್ಷೆಯಲ್ಲಿ ಬಂದ ಕಾಳು ಕಡಿಗಳಿಂದ ಹೊಟ್ಟೆ ಹೊರೆಯುತ್ತಿತ್ತು. ಪಕ್ಕದಲ್ಲಿಯೇ ಭಕ್ತಿಯಿಂದ ಕೈಕಟ್ಟಿ ನಿಂತುಕೊಂಡಿದ್ದ ಪಕ್ಕೀರನ ಭುಜವನ್ನು ತಿವಿದು, “ಒಳಗ ಯಲ್ಲವ್ವ ಅದಾಳ ಅಂತ್ ಹೇಳಲಾ. ಕಾಲ್ಮರಿಗಿಗಾಲಲೆ ಅಡಿಗಿ ಮನೀಗಿ ಹೋಗ್ಯಾವ ಸ್ವಾದಗೇಡಿಗೋಳ್” ಎಂದು ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದಂತೆಯೇ, “ಏ ಸುಮ್ಮನಿರಬೇ. ಅವರು ಬೆಂಗಳೂರಿಂದ್ ಬಂದಾರ. ಮಂತ್ರಿಗೋಳ್ ಕಡೇವ್ರ ಅಂತ್” ಎಂದು ಪಿಸುಗುಟ್ಟಿದವನೇ ಮತ್ತೆ ವಿನಮ್ರವಾಗಿ ಕೈಕಟ್ಟಿಕೊಂಡು ನಿಂತುಕೊಂಡ ಪಕ್ಕೀರ. “ಏ ಬಾಡಕೋ ಎಲ್ಲಿಂದರ ಬರಲಿ. ಯಲ್ಲವ್ವನಗಿಂತ್ ದೊಡ್ಡವರ ಏನ್ ಇವರ?” ಎಂದು ಕೆಂಗಣ್ಣು ಬಿಡುತ್ತಿದ್ದಂತೆಯೇ, “ಏ ಸುಮ್ಮನಿರಬೇ” ಎಂದು ಕೊಸರಿಕೊಂಡು ಪಕ್ಕೀರ ಬೇರೊಂದು ಮೂಲೆಗೆ ಸರಿದು ನಿಂತ. ಅಷ್ಟರಲ್ಲಿಯೇ ರೌದ್ರಾವತಾರವನ್ನು ತಾಳಿದ್ದ ಸಾಕವ್ವನ ಮೈಯ್ಯನ್ನು ಎಲ್ಲಮ್ಮ ಪ್ರವೇಶಿಸಿಯಾಗಿತ್ತು. ಆಹಾಹಾಹಾ... ಎಂದು ನಡುಗುತ್ತಿದ್ದ ಸಾವಕ್ಕ ಅಡಿಗೆ ಮನೆಯತ್ತ ನುಗ್ಗಬೇಕೆನ್ನುವಷ್ಟರಲ್ಲಿ ಪಂಚಾಯ್ತಿ ಮೆಂಬರ್ ಮರಿಬಸಪ್ಪ ಸಾವಕ್ಕನ ರಟ್ಟೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಬಿಟ್ಟರು. ಕುತೂಹಲ ತಣಿಕೆಗೆಂದು ಬಂದಿದ್ದ ಜನರಲ್ಲಿ ಇನ್ನಿಬ್ಬರು ಸಾವಕ್ಕನನ್ನು ಹತ್ತಿರದಲ್ಲಿಯೇ ಇದ್ದ ದುರ್ಗಮ್ಮನ ಗುಡಿಗೆ ಎಳೆದುಕೊಂಡು ಹೋದರು. ಸಾವಕ್ಕನ ಮೈಮೇಲೆ ಬಂದಿದ್ದ ಎಲ್ಲಮ್ಮ ಕೆರಳಿ ಬೆಂಕಿಯುಂಡೆಯನ್ನು ಉಗುಳುತ್ತಿದ್ದಳು. ‘‘ಕಾಲ್ಮರಿ ಮೆಟಗೊಂಡ್ ಬರತೀರಿ ಏನ್ರಲೇ? ನಿಮ್ಮ ವೋಸ್ ನಿರ್ವೋಸ್ ಆಕ್ಕತಿ. ನಿಮ್ಮ ಹೆಂಡರು ರಂಡಿಮುಂಡಿ ಆಗಲಿ, ನಿಮ್ಮನ್ನ್ ನಾ ಸುಮ್ಮನ ಬಿಡೂದುಲ್ಲ.’’ ಎಂದು ಶಾಪ ಹಾಕುತ್ತ ಸಾವಕ್ಕ ಕೊಸರಾಡುತ್ತಿದ್ದಳು. ಸಾವಕ್ಕಳ ಮೈಮೇಲೆ ಬಂದಿದ್ದ ದೇವರು ಸನಮಂತಾಗದೇ ಇದ್ದಾಗ ಅಲ್ಲಿದ್ದ ಯುವಕರಿಬ್ಬರು ಎರಡು ಕೊಡಪಾನ ನೀರನ್ನು ಸುರಿದು ಸಾವಕ್ಕನ ಹಣೆಗೆ ಬಂಡಾರವನ್ನು ಹಚ್ಚಿ, “ಯವ್ವಾ ಯೋಳ್ ಕೊಳ್ಳದಕೆ ಶಾಂತ್ ಆಗು. ಏನs ತಿಳೀದs ತಪ್ಪ್ ಮಾಡ್ಯಾರ. ಅವರ ತಪ್ಪನ ಹೊಟ್ಯಾಗ ಹಕ್ಕೋ” ಎಂದು ಅಡ್ಡ ಬಿದ್ದ ಮೇಲೆಯೇ ಸಾವಕ್ಕಳ ಮೇಲೆ ಬಂದಿದ್ದ ದೇವರು ಸನಮಂತಾಗಿದ್ದು. ಇತ್ತ ಸಾವಕ್ಕನ ಮನೆಯ ಇನ್‌ಸ್ಪೆಕ್ಷನ್ ಮುಗಿಸಿಕೊಂಡು ಅಧಿಕಾರಿಗಳು ಕಾರನ್ನೇರಿ ಬೆಂಗಳೂರಿನ ದಾರಿ ಹಿಡಿದಿದ್ದರು.